## ಎತ್ತಿನಹೊಳೆ ಯೋಜನೆ ಅವೈಜ್ಞಾನಿಕ ಎಂದ ಐಐಎಸ್‌ಸಿ ವಿಜ್ಞಾನಿಗಳು

# ಕೋಲಾರಕ್ಕೆ ಕೊಡಲು ನೀರೇ ಇಲ್ಲ!

**ಅಭಿಷೇಕ ಡಿ.ಪುಂಡಿತ್ತೂರು** ಬೆಂಗಳೂರು

ಎತ್ತಿನಹೊಳೆ ಯೋಜನೆ ಬಗ್ಗೆ ಮತ್ತೊಮ್ಮೆ ವಾಸ್ತವ ಅಂಶ ಬಿಚ್ಚಿಟ್ಟಿರುವ ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರು, ಯೋಜನೆಯಿಂದ ಜಲಾನಯನ ಪ್ರದೇಶದ ಜನಜೀವನಕ್ಕೆ ಅಪಾಯ ಎದುರಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಎತ್ತಿನ ಹೊಳೆಯಲ್ಲಿ 24 ಟಿಎಂಟಿ ನೀರಿದೆ ಎಂಬ ಅಧಿಕಾರಿಗಳ ವಾದ ವಾಸ್ತವ ಅಂಶ ಅಲ್ಲ. ಅಲ್ಲದೆ ವಾಸ್ತವವಾಗಿ ಪ್ರತಿ ವರ್ಷ ವಾಡಿಕೆಯ ಮಳೆ ಪ್ರಮಾಣವನ್ನು ಹೆಚ್ಚಾಗಿ ಬಿಂಬಿಸಲಾಗಿದೆ. ಇದು ಸತ್ಯಕ್ಕೆ ದೂರವಾದ ಸಂಗತಿಯಾಗಿದ್ದು, ಒಟ್ಟಾರೆ 9.5 ಟಿಎಂಸಿಯಷ್ಟೇ ನೀರು ಲಭ್ಯವಾಗಲಿದೆ. ಹೀಗಾಗಿ ಈ ನೀರನ್ನು ಕೋಲಾರ ಭಾಗಕ್ಕೆ ಮೇಲೆತ್ತುವುದು ಕಷ್ಟಸಾಧ್ಯ ಎಂದು ಅಗತ್ಯ ಪುರಾವೆಗಳೊಂದಿಗೆ ಐಐಎಸ್‌ಸಿ ವರದಿ ಸಿದ್ಧಗೊಳಿಸಿದೆ.

ಲಭ್ಯವಿರುವ 9.5 ಟಿಎಂಸಿ ನೀರಿನಲ್ಲಿ ಆ ಭಾಗದ ಒಟ್ಟು ವಾಣಿಜ್ಯವಾಗೂ ನೀರಾವರಿ ಬೆಳೆಗಳ ಉಪಯೋಗಕ್ಕೆ 5.84 ಟಿಎಂಸಿ ನೀರು ಅಗತ್ಯ. ಈ ನೀರನ್ನು ಯೋಜನೆಯ ಮೂಲಕ ಕೋಲಾರಕ್ಕೆ ತಿರುಗಿಸಿದಲ್ಲಿ ಆ ಭಾಗದ ಕೃಷಿ ಹಾಗೂ ತೋಟಗಾರಿಕಾ ಬೆಳೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಲಿದೆ. ಇನ್ನು 3.16 ಟಿಎಂಸಿಯಷ್ಟು ನೀರು ಆವಿಯಾಗುತ್ತದೆ.

ಸಂಸ್ಥೆ ಈ ಹಿಂದೆ ನೀಡಿದ್ದ ವರದಿ ಹಾಗೂ ವಿಜ್ಞಾನಿ ಟಿ.ವಿ.ರಾಮಚಂದ್ರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೀಡಿದ ಪತ್ರದಲ್ಲೂ ಯೋಜನೆಯ ಅವೈಜ್ಞಾನಿಕತೆ ಬಗ್ಗೆ ವಿವರಿಸಲಾಗಿತ್ತು. ಯೋಜನಾ ವರದಿಯಲ್ಲಿ ಪ್ರಸ್ತಾಪಿಸಿದ ನೀರು ಲಭ್ಯವೇ ಇಲ್ಲದಿರುವಾಗ ಕೋಲಾರ ಭಾಗಕ್ಕೆ ನೀರೆತ್ತುವುದೇ ಅವೈಜ್ಞಾನಿಕ ಎಂದು ವರದಿಯಲ್ಲಿ ಸ್ಪಷ್ಟಪಡಿಸಲಾಗಿದೆ.

**ಮಳೆ ಮಾಪನದಲ್ಲೇ ಎಡವಿದ ಸರಕಾರ:** ಅಧಿಕಾರಿಗಳು ಸಮರ್ಪಕ ಮಳೆ ಮಾಪನ ಮಾಡದಿರುವುದೇ ಅವೈಜ್ಞಾನಿಕ ಯೋಜನೆ ಅನುಷ್ಠಾನಕ್ಕೆ ಕಾರಣವಾಗಿದೆ. ಅಲ್ಲದೆ ಕಳೆದ ನಾಲ್ಕು ವರ್ಷದಲ್ಲಿ ಎತ್ತಿನಹೊಳೆ ಜಲಾನಯನ ಪ್ರದೇಶದಲ್ಲಿ ವಾಣಿಜ್ಯ ಚಟುವಟಿಕೆಗಳಲ್ಲಿ ಶೇ.30ರಷ್ಟು ಏರಿಕೆ ಕಂಡಿದೆ. ಅಂತೆಯೇ ಜನ ವಾಸ ಪ್ರದೇಶವೂ ಹೆಚ್ಚಳವಾಗಿದೆ. 12 ವರ್ಷದಿಂದ ಹಿಂದಿನ ಮಳೆ ಮಾಪನದ ಆಧಾರದಲ್ಲಿ 24 ಟಿಎಂಸಿ ನೀರಿನ ಲಭ್ಯತೆ ಇರುವಿಕೆ ಬಗ್ಗೆ ಯೋಜನಾ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

| ಪ್ರದೇಶ | ಸರಾಸರಿ ವಾರ್ಷಿಕ ಮಳೆ (ಮಿಮಿ) | ಮಳೆ ಪ್ರಮಾಣ (ಟಿಎಂಸಿಯಲ್ಲಿ) | ನೀರಿನ ಲಭ್ಯತೆ (ಟಿಎಂಸಿಯಲ್ಲಿ) |
|---|---|---|---|
| ಎತ್ತಿನಹೊಳೆ | 3539.73 | 5.98 | 2.62 |
| ಎತ್ತಿನಹೊಳೆ ಟಿ2 | 4311.11 | 1.23 | 0.58 |
| ಎತ್ತಿನಹೊಳೆ ಟಿ1 | 4109.99 | 1.33 | 0.57 |
| ಕಾಡುಮನೆ ಹೊಳೆ 2 | 4364.85 | 1.2 | 0.53 |
| ಕಾಡುಮನೆ ಹೊಳೆ1 | 4725.54 | 1.79 | 0.7 |
| ಹೊಂಗಡಹಳ್ಳ | 4000.77 | 6.7 | 2.68 |
| ಕೆರಿ ಹೊಳೆ | 4013.09 | 2.69 | 1.17 |
| ಎತ್ತಿಹೊಳೆ ಕೆಳಭಾಗ | 4385.25 | 1.81 | 0.69 |
| ಸರಾಸರಿ ನೀರಿನ ಲಭ್ಯತೆ | 9.55 | | |

### ವಿಜ್ಞಾನಿಗಳು ಹೇಳಿದ್ದೇನು?

1. ಅವೈಜ್ಞಾನಿಕ ಯೋಜನೆಯ ವೆಚ್ಚವನ್ನು ಕೋಲಾರ ಚಿಕ್ಕಬಳ್ಳಾಪುರದಲ್ಲಿರುವ ಕೆರೆಗಳ ಪುನರುಜ್ಜೀವಕ್ಕೆ ಬಳಸಿ
2. ಹೂಳು ತುಂಬಿರುವ ಕೆರೆಯನ್ನು ಸ್ವಚ್ಛಗೊಳಿಸಿ, ಮಳೆ ನೀರು ಸಂಗ್ರಹಿಸಿದರೆ 115 ಟಿಎಂಸಿ ನೀರು ಸಂಗ್ರಹಣೆ ಸಾಧ್ಯ
3. ಕಳೆದ ಮೂರ್‍ನಾಲ್ಕು ವರ್ಷದಲ್ಲಿ ಸರಾಸರಿ ನಾಲ್ಕು ಸಾವಿರ ಮಿಮಿ ದಾಟಿಲ್ಲ
4. ಕೋಲಾರಕ್ಕೆ ನೀರು ಎತ್ತಲು ನೀರೇ ಉಳಿಯುವುದಿಲ್ಲ. ಯೋಜನೆಯಿಂದ ಆ ಭಾಗದ ಜನಜೀವನಕ್ಕೆ ಅಪಾಯ ಖಚಿತ